ಸಂಶೋಧಕರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ತಾನು ಕೆಲಸ ಮಾಡುತ್ತಿರುವ ಸಂಶೋಧನಾ ಕ್ಷೇತ್ರದ ಭವಿಷ್ಯವೇನು? ಅದನ್ನು ತನ್ನ ಸಂಶೋಧನೆಯ ಮೂಲಕ ಹೇಗೆ ವಿಸ್ತರಿಸಿಕೊಳ್ಳಬಹುದು ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳದ ಹೊರತು ತನ್ನ ಸಂಶೋಧನೆಯ ಬಗೆಗೆ ಸಂಶೋಧಕನಿಗೇ ಗೌರವ ಹುಟ್ಟಲಾರದು. ಕಳೆದ ಸುಮಾರು 25 ವರ್ಷಗಳಲ್ಲಿ ಪ್ರಕಟವಾದ ನಾಲ್ಕಾರು ಪುಸ್ತಕಗಳನ್ನು ಹೊರತು ಪಡಿಸಿದರೆ, ಯಾವುದೇ ಮಹತ್ವದ ಸಂಶೋಧನಾ ಗ್ರಂಥ ಪ್ರಕಟವಾದದ್ದು ನನ್ನ ಗಮನಕ್ಕೆ ಬಂದಿಲ್ಲ. ಈ ಪರಿಸ್ಥಿತಿಯಿಂದ ಸಂಶೋಧನೆಯನ್ನು ಪಾರು ಮಾಡುವ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳು ಹೊರದೆ ಬೇರೆ ಹಾದಿಯಿಲ್ಲ.

**◆ ನವದೆಹಲಿಗೆ ಹೋದಮೇಲೆ ನಿಮ್ಮ ಕನ್ನಡದ ಬರವಣಿಗೆ ಕಡಿಮೆ ಆಯಿತು...**

ನಾನು ಮಂಗಳೂರು ವಿಶ್ವವಿದ್ಯಾಲಯ ಬಿಟ್ಟ ಮೇಲೆ ನನ್ನ ಬರವಣಿಗೆ ಕಡಿಮೆಯಾಯಿತು. ಅದಕ್ಕೆ ಕಾರಣ ನಾನು ಕನ್ನಡ ಪರ ಸಂಸ್ಥೆಗಳನ್ನು ಕಟ್ಟಲು ದುಡಿಯಲಾರಂಭಿಸಿದ್ದು. ಕನ್ನಡ ವಿಶ್ವವಿದ್ಯಾಲಯದ ಆರಂಭದ ಆರು ವರ್ಷಗಳನ್ನು ವಿಶ್ವವಿದ್ಯಾಲಯವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಲು ಕೆಲಸ ಮಾಡಿದೆ. ಮುಂದೆ 15 ವರ್ಷಗಳ ಕಾಲ ಅಮೆರಿಕಾ ಸಂಸ್ಥೆಯೊಂದರಲ್ಲಿ ದುಡಿದೆ. ಈ ಅವಧಿಯಲ್ಲಿ ದೇಶ ವಿದೇಶಗಳನ್ನು ಸುತ್ತಿದೆನಾದರೂ ಒಂದೆಡೆ ಕುಳಿತು ಕನ್ನಡದಲ್ಲಿ ಬರೆಯುವ ಅವಕಾಶ ಒದಗಲೇ ಇಲ್ಲ. ಈ ನಡುವೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾದೆ. ಆ ಅವಧಿಯಲ್ಲಿ ಸಂಘಕ್ಕೊಂದು ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣಗೊಳ್ಳಲು ನಿಷ್ಠೆಯಿಂದ ದುಡಿದೆ. ಪರಿಣಾಮವಾಗಿ ಇವತ್ತು ನೀವೆಲ್ಲರೂ ನೋಡಬಹುದಾದ ಅದ್ಭುತ ಕಟ್ಟಡವೊಂದು ನವದೆಹಲಿಯ ಹೃದಯ ಭಾಗದಲ್ಲಿ ತಲೆ ಎತ್ತಿ ನಿಂತಿತು.

ಮುಂದೆ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕನಾಗಿ ಸೇರಿಕೊಂಡು ಅಲ್ಲಿ ಕನ್ನಡ ಕಟ್ಟುವ ಕೆಲಸ ಆರಂಭಿಸಿದೆ. ಇದೀಗ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯವಾದ ಒಂದು ಮನ್ನಣೆ ದೊರಕುವಂತೆ ಕನ್ನಡ ಭಾಷಾ ಪೀಠ ಕೆಲಸಮಾಡುತ್ತಿದೆ. ರಾಷ್ಟ್ರ ಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ದೇಶ ವಿದೇಶಗಳ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವುದು, ಕನ್ನಡದ ಮುಖ್ಯ ಲೇಖಕರನ್ನು ಅಖಿಲಭಾರತ ಮಟ್ಟದ ಲೇಖಕರೊಂದಿಗೆ ಇರಿಸಿ ತೌಲನಿಕವಾಗಿ ಚರ್ಚಿಸುವುದು, ಕನ್ನಡದ ಅಭಿಜಾತ ಸಾಹಿತ್ಯ ಪರಂಪರೆಗೆ ಸೇರಿದ, 'ಕವಿರಾಜಮಾರ್ಗ', 'ವಡ್ಡಾರಾಧನೆ', 'ಗದಾಯುದ್ಧ' ಮೊದಲಾದ ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸುವುದು, ಹೊರನಾಡಲ್ಲಿರುವ ಕನ್ನಡಿಗರಿಗೆ ಮತ್ತು ಒಳನಾಡಿನಲ್ಲಿರುವ ಕನ್ನಡೇತರರಿಗೆ ಕನ್ನಡ ಕಲಿಯಲು ಅನುಕೂಲವಾಗುವಂತೆ ಆನ್‌ಲೈನ್ ಕನ್ನಡ ಕಲಿಕೆಗೆ ಹೊಸಬಗೆಯ ಅಂತರ್ಜಾಲವೊಂದನ್ನು ಸಿದ್ಧಪಡಿಸುವುದು, ಕರ್ನಾಟಕ ಸಂಸ್ಕೃತಿಯ ವಿವಿಧ ಮುಖಗಳನ್ನು ಜೆ.ಎನ್.ಯು.ವಿಗೆ ಪರಿಚಯಿಸುವ ಕೆಲಸಮಾಡುವುದು, ಇತ್ಯಾದಿ ಕೆಲಸಗಳು ಈಗ ನಡೆಯುತ್ತಿವೆ.

ಈ ಬಗೆಯ ಕೆಲಸಗಳಿಂದಾಗಿ ಹೆಚ್ಚು ಬರೆಯಲಾಗಿಲ್ಲ, ನಿಜ. ಆದರೆ ಕನ್ನಡಕ್ಕಾಗಿ ಉಪಯುಕ್ತವಾದ ಸಂಸ್ಥೆಗಳನ್ನು ಸ್ಥಾಪಿಸುವುದು, ಮತ್ತು ಅದಕ್ಕಾಗಿ ಕೆಲಸಮಾಡುವುದು ಒಂದು ಲೇಖನವೋ, ಪುಸ್ತಕವೋ ಬರೆದಷ್ಟೇ ಮುಖ್ಯ ಎಂದು ನಾನು ಉದ್ದಕ್ಕೂ ಭಾವಿಸಿಕೊಂಡೇ ಬಂದಿದ್ದೇನೆ.

ಇಷ್ಟಿದ್ದರೂ ನಿವೃತ್ತಿಯಾದ ಮೇಲೆ ಸ್ವಲ್ಪ ಜಾಸ್ತೀನೇ ಬರೆಯಬೇಕೆಂದು ಯೋಚಿಸುತ್ತಿದ್ದೇನೆ. ನೋಡೋಣ, ಎಷ್ಟು ಸಾಧ್ಯವಾದೀತು ಅಂತ!

**◆ ನವದೆಹಲಿಯಲ್ಲಿ ತಮ್ಮ ಭಾಷೆಗಳ ಕೆಲಸ ಆಗುವಂತೆ ಮಾಡಲು ಬೇರೆ ಭಾಷೆಗಳ ಜನರ ಲಾಬಿ**